*(ಈ ಹಂತದಲ್ಲಿ ಮಾನ್ಯ ವಾಟಾಳ್‌ನಾಗರಾಜ್‌ರವರು ಸದನದ ಬಾವಿಗೆ ಬಂದು ಧರಣಿ ಕುಳಿತರು)*

***(ಅ) ಭಟ್ಕಳದಲ್ಲಿ ನಡೆದಂತಹ ಕೋಮುಗಲಭೆಗಳ ಬಗ್ಗೆ ಜಗನ್ನಾಥ್‌ಶೆಟ್ಟಿ ಆಯೋಗದ ವರದಿ ಕುರಿತು***

**ಶ್ರೀ ಶಿವಾನಂದ ನಾಯಕ್** (ಭಟ್ಕಳ) : ಮಾನ್ಯ ಛೇರ್ಮನ್‌ರವರೆ, ಭಟ್ಕಳದಲ್ಲಿ 1978, 1989 ಮತ್ತು 1991ಹಾಗೂ 1993ರಲ್ಲಿ ನಿರಂತರವಾಗಿ 10 ತಿಂಗಳ ಕಾಲ ಕೋಮುಗಲಭೆ ನಡೆಯಿತು. ಈ ಕೋಮು ಗಲಭೆಗಳ ಕುರಿತು ವಿಚಾರಣೆ ನಡೆಸುವುದಕ್ಕೆ ಜಗನ್ನಾಥ ಶೆಟ್ಟಿ ಆಯೋಗವನ್ನು ಸರ್ಕಾರ ನೇಮಕ ಮಾಡಿತ್ತು. ಸದರಿ ಆಯೋಗ ತನ್ನ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿ ಈಗಾಗಲೇ ಎರಡೂವರೆ ವರ್ಷ ಆಗಿದೆ. ಆದರೆ, ಸರ್ಕಾರ ಈ ವರದಿಯನ್ನು ಮುಚ್ಚಿಟ್ಟಿದೆ. ಈ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿದ ನಂತರ, ಇಲ್ಲಿನ ಕೋಮುಗಲಭೆಗೆ ಭಾಗವಹಿಸಿ ರಾಷ್ಟ್ರ ದ್ರೋಹಿ ಕೆಲಸ ಮಾಡಿದಂಥ ಆ ಕೊಲೆಗಡುಕರಿಗೆ ನಮ್ಮ ಮೇಲೆ ಕ್ರಮ ಕೈಗೊಳ್ಳಬಹುದೆಂಬ ಭಯಭೀತಿ ಅವರಿಗೆ ಇತ್ತು. ಸರ್ಕಾರ ಈ ವರದಿಯನ್ನು ಮುಚ್ಚಿಟ್ಟ ನಂತರ ಇವತ್ತು ಮತ್ತೆ ಅವರೆಲ್ಲಾ ಬೀದಿಗೆ ಇಳಿದಿದ್ದಾರೆ. 1993ರಲ್ಲಿದ್ದಂಥ ಸರ್ಕಾರ ಮತ್ತು ಅಧಿಕಾರಿಗಳು ಶಾಮೀಲಾಗಿ ಈ ರೀತಿ ಕೋಮು ಗಲಭೆ ಆಗುವುದಕ್ಕೆ ಕಾರಣ ಆಯಿತು. ಇದರಲ್ಲಿ ಐ.ಎ.ಎಸ್. ಅಧಿಕಾರಿಗಳ ಕೈವಾಡ ಇದೆ ಎಂದು ಹೇಳಲಾಗಿದೆ ಮತ್ತು 17 ಜನರ ಕೊಲೆಯಾಯಿತು ಮತ್ತು 5 ಜನರ ನಾಪತ್ತೆ ಆಯಿತು ಹಾಗೆಯೇ 18ನೇ ಯವರಾಗಿ ಈ ಮನೆಯ ಸದಸ್ಯರಾಗಿದ್ದಂಥ ಡಾ|| ಚಿತ್ತರಂಜನ್‌ರವರ ಕೊಲೆ ಆಯಿತು. ಈ ಹಿನ್ನೆಲೆಯಲ್ಲಿ ಮತ್ತೊಂದು ರಾಮಚಂದ್ರ ಆಯೋಗವನ್ನು ಸರ್ಕಾರ ರಚನೆ ಮಾಡಿದ್ದರು. ರಾಮಚಂದ್ರ ಆಯೋಗದ ವರದಿಯನ್ನು ಸರ್ಕಾರಕ್ಕೆ ಕೊಟ್ಟು ಒಂದೂವರೇ ವರ್ಷ ಆಗಿದ್ದು, ಸರ್ಕಾರ ಇದನ್ನು ಸಹ ಮುಚ್ಚಿಟ್ಟಿದ್ದಾರೆ. ಅಂದರೆ, ಇವರು ಕೊಲೆಗಡುಕರಿಗೆ ರಕ್ಷಣೆಯನ್ನು ಕೊಡುವಂತಹ ಕೆಲಸವನ್ನು ಈ ಜನತಾದಳ ಸರ್ಕಾರ ಮಾಡುತ್ತಿದೆ. ಹಿಂದಿನ ಸರ್ಕಾರ ಅವರಿಗೆ ಎಲ್ಲಾ ರೀತಿಯ ಸಹಕಾರವನ್ನು ಕೊಟ್ಟಿತು. ಅಂತಹ ಕೊಲೆಗಡುಕರ ರಕ್ಷಣೆಯನ್ನು ಮಾಡುವಂತಹ ಕೆಲಸವನ್ನು ಮಾಡುತ್ತಿದ್ದಾರೆ. ಇಲ್ಲವೆಂದರೆ, ಇದನ್ನು ಈ ಸದನದಲ್ಲಿ ಇವರು ಏಕೆ ಮಂಡಿಸುತ್ತಿಲ್ಲ. ಸಾರ್ವಜನಿಕರ ಕೋಟ್ಯಾಂತರ ರೂಪಾಯಿಗಳನ್ನು ವೆಚ್ಚ ಮಾಡಿ, ಆಯೋಗವನ್ನು ರಚನೆ ಮಾಡಿಕೊಂಡು ಆ ಆಯೋಗದ ವರದಿ ಇವತ್ತು ಏನು ಕೊಟ್ಟಿದೆ. ಇವತ್ತು ಅಲ್ಲಿ ಕೊಲೆಗಡುಕರಿಗೆ ಯಾರದೇ ಹಂಗಿಲ್ಲ. ಅವರಿಗೆ ಯಾವುದೇ ರೀತಿಯಲ್ಲಿ ಏನು ಮಾಡಿದರೂ ನಡೆಯುತ್ತದೆ ಎಂಬ ಮನೋಭಾವನೆ ಬಂದಿದೆ. ಅವರಿಗೆ ಆ ರೀತಿಯಲ್ಲಿ ರಕ್ಷಣೆಯನ್ನು ಕೊಡುತ್ತಿದ್ದಾರೆ. ದಯಮಾಡಿ ಭಟ್ಕಳದ ಜನರ ಹಿತದೃಷ್ಟಿಯಿಂದ ತಾವೇನು ಈ ವರದಿಯನ್ನು ಮುಚ್ಚಿಟ್ಟಿದ್ದೀರಿ ಇದರಿಂದ ನಾಳೇ 1993ರಲ್ಲಿ ನಡೆದಂತಹ ಪರಿಣಾಮ ಬರಬಹುದು. ದಯಮಾಡಿ ಈ ವರದಿಯನ್ನು ಸದನದಲ್ಲಿ ಮಂಡಿಸಿ ಸತ್ಯಾಂಶವನ್ನು ಜನರಿಗೆ ಮತ್ತು ರಾಜ್ಯಕ್ಕೆ ಹಾಗೂ ಭಟ್ಕಳದ ಜನರಿಗೆ ತಿಳಿಸುವಂಥ ಕೆಲಸವನ್ನು ತಾವು ದಯಮಾಡಿ ಮಾಡಬೇಕು. ಇಲ್ಲವೆಂದರೆ, ಇದರಲ್ಲಿ ಯಾರು ಶಾಮೀಲಾಗಿದ್ದಾರೋ ಅವರೊಂದಿಗೆ ನೀವು ಶಾಮೀಲಾಗಿ ನೀವು ಆ ಕೊಲೆಗಡುಕರಿಗೆ ರಕ್ಷಣೆಯನ್ನು ಕೊಡುತ್ತೀರಿ ಎನ್ನುವ ಭಾವನೆ ರಾಜ್ಯದ ಜನರಿಗೆ ಮತ್ತು ಭಟ್ಕಳದ ಜನರಿಗೆ ಬರುತ್ತದೆ. ದಯಮಾಡಿ ಆ ವರದಿಯನ್ನು ಸದನದಲ್ಲಿ ಮಂಡಿಸಬೇಕೆಂದು ಮತ್ತೊಮ್ಮೆ ನಾನು ವಿನಂತಿಮಾಡಿ ಕೊಳ್ಳುತ್ತಿದ್ದೇನೆ.

**ಶ್ರೀ ವಿಶ್ವೇಶ್ವರ ಹೆಗಡೆ :** ಮಾನ್ಯ ಛೇರ್ಮನ್‌ರೆ, ಈ ವಿಷಯವು ಸದನದಲ್ಲಿ ಪ್ರಸ್ತಾಪನೆಯಾಗಿ ಮಾನ್ಯ ಕಾನೂನು ಸಚಿವರು ಒಂದು ಆಯೋಗವು ವರದಿಯನ್ನು ಕೊಟ್ಟ ನಂತರ ನಮ್ಮ ನಿಯಮಾವಳಿಗಳ ಪ್ರಕಾರ ಆರು ತಿಂಗಳೊಳಗೆ ಸದನದಲ್ಲಿ ಮಂಡಿಸಬೇಕು. ಮತ್ತು ಆಕ್ಷನ್ ಟೇಕನ್ ರಿಪೋರ್ಟ್‌ನ್ನು ಸಹ ಸದನದಲ್ಲಿ ಮಂಡಿಸಬೇಕು.

**ಛೇರ್ಮನ್ :** ಮಂತ್ರಿಗಳು ಏನು ಹೇಳುತ್ತಾರೆ ಕೇಳೋಣ.

**ಶ್ರೀ ವಿಶ್ವೇಶ್ವರ ಹೆಗಡೆ :** ನನ್ನದು ಏನೆಂದರೆ, ನಾವು ಈ ಹಿಂದೆ ವಿಷಯವನ್ನು ಪ್ರಸ್ತಾಪ ಮಾಡಿದಾಗ ಅವರು ಮುಂದಿನ ದಿನಗಳಲ್ಲಿ ಮಂಡಿಸುತ್ತೇವೆಂದು ಹೇಳಿದ್ದು. ನಾನು ಈ ಅಧಿವೇಶನ ಪ್ರಾರಂಭವಾಗಿ 20 ದಿನದಿಂದಲೂ ಈ ವಿಷಯವನ್ನು ಕೇಳುತ್ತಿದ್ದೇವೆ. ಇವತ್ತು ಅಧಿವೇಶನ ನಡೆಯುತ್ತಿರುವ ಕೊನೆಯ ದಿನವಾಗಿದ್ದು, ಈ ದಿನ ಸರ್ಕಾರದ ಮಂತ್ರಿಗಳು ಖಚಿತವಾಗಿ ಯಾವತ್ತು ಮಂಡಿಸುತ್ತೇವೆಂದು ಹೇಳ ಬೇಕು. ವರದಿಯನ್ನು ಮಂಡಿಸದೇ ಹೋದರೆ ಈ ರಾಜ್ಯಕ್ಕೆ ದೊಡ್ಡ ತಪ್ಪು ಸಂದೇಶವು ಹೋಗುತ್ತದೆ. ಸುರತ್ಕಲ್‌ನ ಬಗ್ಗೆ ಒಂದು ಆಯೋಗವಾಗಿದೆ. ಅದರ ಬಗ್ಗೆ ವರದಿಯನ್ನು ಮಂಡಿಸದೇ ಹೋದರೆ?

**ಶ್ರೀ ಕೆ.ಎಸ್. ಈಶ್ವರಪ್ಪ :** ಇದರ ಬಗ್ಗೆ ಮಾನ್ಯ ಸುರೇಶ್ ಕುಮಾರ್‌ರವರು ಪ್ರಸ್ತಾಪ ಮಾಡಿದಾಗ ಇನ್ನು 6 ತಿಂಗಳಲ್ಲಿ ಮಂಡಿಸುತ್ತೇವೆಂದು ಹೇಳಿದ್ದರು. ಇವತ್ತು ತಾವು ಇದನ್ನು ಮಾಡದೇ ಹೋದರೆ ರಾಜ್ಯದಲ್ಲಿ ತಪ್ಪಿತಸ್ಥರಾಗುತ್ತೀರಿ. ದಯಮಾಡಿ ಸ್ಪಷ್ಟವಾಗಿ ಹೇಳಿಬಿಡಿ. ಏಕೆಂದರೆ, ಯಾರು ಈ ರೀತಿ ಕೊಲೆಗಡುಕರು ಇದ್ದಾರೋ ಸರ್ಕಾರ ಅಂಥವರಿಗೆ ರಕ್ಷಣೆಯನ್ನು ಕೊಟ್ಟಂತೆ ನಮಗೂ ರಕ್ಷಣೆ ಕೊಡುತ್ತದೆ ಎನ್ನುವ ಭಾವನೆ ಜನರಿಗೆ ಬರುವುದಕ್ಕೆ ಪ್ರಾರಂಭವಾಗಿದೆ. ಇದರ ಬಗ್ಗೆ ತಾವು ಏನು ಕ್ರಮವನ್ನು ತೆಗೆದುಕೊಳ್ಳುತ್ತೀರಿ ಹಾಗೂ ಇದನ್ನು ಯಾವಾಗ ಮಂಡನೆ ಮಾಡುತ್ತೀರಿ, ಇದರ ಬಗ್ಗೆ ತಾವು ತಕ್ಷಣವೇ ಉತ್ತರವನ್ನು ಹೇಳಬೇಕೆಂದು ನಾನು ಇಷ್ಟಪಡುತ್ತೇನೆ.

**ಶ್ರೀ ಎಂ.ಪಿ. ನಾಣಯ್ಯ(ಕಾನೂನು ಸಚಿವರು) :** ಮಾನ್ಯ ಛೇರ್ಮನ್‌ರೆ, ಕಳೆದ ಸದನದಲ್ಲಿ ಇದನ್ನು ಪ್ರಸ್ತಾಪ ಮಾಡುವ ಸಂದರ್ಭದಲ್ಲಿ ನಾನು ಈ ಮಾತನ್ನು ಸದನದಲ್ಲಿ ಹೇಳಿದ್ದು ನಿಜ. ಈ ಒಂದು ವರದಿಯು ಸರ್ಕಾರದ ಪರಿಶೀಲನೆಯಲ್ಲಿದೆ. ಇದನ್ನು ಸಚಿವರ ಸಂಪುಟದ ಮುಂದೆ ತಂದು ಆ ವರದಿಯಲ್ಲಿರತಕ್ಕಂಥ ವಿಚಾರದಲ್ಲಿ ಯಾವುದನ್ನು ಒಪ್ಪಬೇಕು, ಯಾವುದನ್ನು ಒಪ್ಪಬಾರದು ಎಂಬ ಬಗ್ಗೆಯೂ ಕೂಡ ಸರ್ಕಾರ ಕ್ರಮವನ್ನು ಕೈಗೊಳ್ಳಬೇಕಾಗುತ್ತದೆ. ಮೂರನೆಯದಾಗಿ ಸೂಕ್ಷ್ಮವಾದಂಥ ವಿಚಾರಗಳಿದ್ದಂಥ ಸಂದರ್ಭದಲ್ಲಿ ಅದಕ್ಕೆ ಸಂಬಂಧಪಟ್ಟ ಹಾಗೆ ಸರ್ಕಾರ ಯಾವ ರೀತಿಯ ಕ್ರಮವನ್ನು ಕೈಗೊಳ್ಳಬೇಕು ಎನ್ನತಕ್ಕಂಥದ್ದರ ಬಗ್ಗೆಯೂ ಕೂಡ ನಾನು ಹೇಳಿದ್ದೇನೆ. ಆದ್ದರಿಂದ ಇದರಲ್ಲಿ ಶ್ರೀ ಜಗನ್ನಾಥ್ ಶೆಟ್ಟಿಯವರ ವರದಿ ಮತ್ತು ಡಾ|| ಚಿತ್ತರಂಜನ್‌ರವರ ಕೊಲೆಗೆ ಸಂಬಂಧಪಟ್ಟಂತಹ ವರದಿ, ಇವೆರಡಕ್ಕೂ ಸಂಬಂಧಪಟ್ಟ ಹಾಗೆ ನಾನು ಈಗಾಗಲೇ ಹೇಳಿದ್ದೇನೆ. ಈಗ ನಾವು ಅದನ್ನು ಸಚಿವರ ಸಂಪುಟದ ಮುಂದೆ ತರುವವರಿದ್ದೇವೆ. ಇದರ ಬಗ್ಗೆ ಗೃಹ ಇಲಾಖೆಯಿಂದ ಆಕ್ಷನ್ ಟೇಕನ್ ರಿಪೋರ್ಟ್ ಯಾವುದು ಎಂದು ತಯಾರಾಗಿದೆ. ಈ ಒಂದು ವಿಷಯವನ್ನು ಸಚಿವ ಸಂಪುಟದ ಮುಂದೆ ತಂದು ಅದಾದನಂತರ ಆಕ್ಷನ್ ಟೇಕನ್ ರಿಪೋರ್ಟ್ ಅದನ್ನು ಜೊತೆಯಲ್ಲಿ ಸೇರಿಸಿಕೊಂಡು ನಾವು ಸದನದ ಹಾಗೂ ಸಭಾಧ್ಯಕ್ಷರ ಹಾಗೂ ಮೇಲ್ಮನೆಯ ಸಭಾಪತಿಯವರಿಗೂ ನಾವು ಅದನ್ನು ಸಲ್ಲಿಸುತ್ತೇವೆ.

ಇದನ್ನು ಎಷ್ಟು ದಿವಸಗಳವರೆಗೆ ಎಂದರೆ ಬಹುಶಃ ಅದನ್ನು ನಾವು ಕ್ರೋಢೀಕರಿಸಿಕೊಂಡು ಅದಕ್ಕೆ ಸಂಬಂಧಪಟ್ಟ ವಿಚಾರಗಳಲ್ಲಿ ಕ್ರಮವನ್ನು ಏನು ಕೈಗೊಳ್ಳಬೇಕಾಗುತ್ತದೆ. ಇದರಲ್ಲಿ ನಾವು ಯಾವುದನ್ನು ಒಪ್ಪಬೇಕಾಗುತ್ತದೆ, ಯಾವುದನ್ನು ಒಪ್ಪಿಕೊಳ್ಳುವುದಕ್ಕಾಗುವುದಿಲ್ಲ, ಆಡಳಿತಾತ್ಮಕವಾಗಿ ಯಾವುದನ್ನು ತೆಗೆದುಕೊಳ್ಳಬೇಕು ಎಂಬ ಕ್ರಮದ ಬಗ್ಗೆ ಏನು ಎಂದು ಹೇಳುತ್ತಿರುವ ಬಗ್ಗೆ ವಿವರವಾದಂಥ ಒಂದು ಆ್ಯಕ್ಷನ್ ಟೇಕನ್ ರಿಪೋರ್ಟ್‌ನ್ನು ಮಾಡಿಸಿ ಬಹಳ ಶೀಘ್ರವಾಗಿ ಕೊಡುತ್ತೇವೆ. ನಾವು ಶೀಘ್ರ ಎಂದು ಹೇಳಿದ ಕೂಡಲೇ, ತಾವು ಸಮಯವನ್ನು ತೆಗೆದುಕೊಳ್ಳುತ್ತೀರಾ ಎಂದು ಕೇಳುತ್ತೀರಿ. ಈ ದಿನ ಸದನದ ಕೊನೆಯ ದಿವಸವಾಗಿರುವುದರಿಂದ ಮುಂದಿನ ಒಂದು ತಿಂಗಳೊಳಗಾಗಿ ಖಂಡಿತವಾಗಿ ಇದರ ಬಗ್ಗೆ ಕ್ರಮವನ್ನು ಕೈಗೊಳ್ಳುವಂಥ ಪ್ರಯತ್ನವನ್ನು ಮಾಡುತ್ತೇವೆ.

*(ಗೊಂದಲ)*

**ಶ್ರೀ ಎಸ್. ಸುರೇಶ್ ಕುಮಾರ್ :** ನವೆಂಬರ್‌ನಲ್ಲಿ ತಾವು ಕೊಟ್ಟಿರುವಂಥ ಉತ್ತರಕ್ಕೂ ಏಪ್ರಿಲ್‌ನಲ್ಲಿ ಕೊಟ್ಟಿರುವಂಥ ಉತ್ತರಕ್ಕೂ ಏನು ವ್ಯತ್ಯಾಸವಿದೆ.

**ಶ್ರೀ ಎಂ.ಪಿ. ನಾಣಯ್ಯ :** ನಾನು ವ್ಯತ್ಯಾಸವಿರುವ ಬಗ್ಗೆ ಹೇಳುತ್ತೇನೆ. ತಾವು ಏತಕ್ಕಾಗಿ ಕೇಳುತ್ತಿದ್ದೀರೆಂದು ನನಗೂ ಗೊತ್ತಿದೆ.

**ಶ್ರೀ ಎಸ್. ಸುರೇಶ್ ಕುಮಾರ್ :** ಇದರಲ್ಲಿ ವ್ಯತ್ಯಾಸದ ಪ್ರಶ್ನೆಯೇ ಇಲ್ಲ. ನೀವು ಮಾಡಬೇಕಾಗಿರುವ ಕೆಲಸವನ್ನು ಮಾಡಿಲ್ಲ. ಏತಕ್ಕೆ ತಾವು ಮಾಡಲಿಲ್ಲ, ಅದರ ಉದ್ದೇಶವೇನು?

**ಶ್ರೀ ಕೆ.ಎಸ್. ಈಶ್ವರಪ್ಪ :** ನಾವು ಅಸೆಂಬ್ಲಿಯಲ್ಲಿ ಚರ್ಚೆ ಮಾಡಿದೆವು. ಇವರು ಹೇಳಿದರೂ ನೀವೇ ಕಾರಣ ಎಂದು. ಇವತ್ತು ಜಗನ್ನಾಥಶೆಟ್ಟಿಯವರ ವರದಿ ಬಂದಿದೆ. ಕಳೆದ ಅಧಿವೇಶನದಲ್ಲೂ ಸಹ ಈ ವರದಿ ಬಂದಿದೆ ಎಂದು ತಾವು ಹೇಳಿದ್ದೀರಿ.

**ಶ್ರೀ ಎಂ.ಪಿ. ನಾಣಯ್ಯ :** ವರದಿಯನ್ನು ಯಾವುದೇ ಕಾರಣಕ್ಕೂ ಮುಚ್ಚಿಡುವುದಕ್ಕೆ ಸಾಧ್ಯವಿಲ್ಲ. ಆ ವರದಿಯು ಬಂದಿರುವುದಂತು ನಿಜ. ಆ ವರದಿಯ ಬಗ್ಗೆ ಸರ್ಕಾರ ಏನೇನು ಕ್ರಮಗಳನ್ನು ತೆಗೆದುಕೊಳ್ಳಬೇಕು ಎಂಬ ಬಗ್ಗೆಯೂ ಸಹ ಹೇಳಿದ್ದೇನೆ, ಕಳೆದ ಸಂದರ್ಭದಲ್ಲಿಯೂ ಸಹ ನಾನು ಈ ಬಗ್ಗೆ ಹೇಳಿದ್ದೇನೆ. ಇದರ ಬಗ್ಗೆ ಗೃಹ ಇಲಾಖೆಯಲ್ಲಿ ಇದನ್ನು ಸಂಪೂರ್ಣವಾಗಿ ಪರಿಶೀಲನೆಯನ್ನು ಮಾಡುತ್ತಿದ್ದಾರೆ.

*(ಗೊಂದಲ)*

(ಶ್ರೀ ವಿಶ್ವೇಶ್ವರ ಹೆಗಡೆ, ಅರಗ ಜ್ಞಾನೇಂದ್ರ, ಶಿವಾನಂದ ನಾಯ್ಕ್, ಎನ್.ಯೋಗೀಶ್ ಭಟ್ ಇವರು ಧರಣಿ ಕೂಡಲೂ ಬಾವಿಗೆ ಬಂದರು)

**ಶ್ರೀ ಕೆ.ಎಸ್. ಈಶ್ವರಪ್ಪ :** ಇದು ಸರ್ಕಾರಕ್ಕೆ ಗೌರವ ತರುತ್ತದೆಯೇ?

**ಛೇರಮನ್ :** ನೀವು ಬಾವಿಯಲ್ಲಿ ನಿಂತುಕೊಂಡು ಮಾತನಾಡಿದರೆ ಅದು ರೆಕಾರ್ಡಿಗೆ ಹೋಗುವುದಿಲ್ಲ. ನಾನು ಹೇಳುವುದನ್ನು ಕೇಳಿ, ನೀವು ಶೂನ್ಯ ಪ್ರಶ್ನೋತ್ತರ ವೇಳೆಯಲ್ಲೂ ಸಹ ಧರಣಿ ಮಾಡುವುದು. ಪ್ರಶ್ನೋತ್ತರ ವೇಳೆಯಲ್ಲೂ ಸಹ ಧರಣಿ ಮಾಡುವುದು. ಯಾವ ಯಾವ ಸಂದರ್ಭದಲ್ಲಿ ಧರಣಿ

ಮಾಡಬೇಕೆಂದು ನಿಯಮವಿದೆಯಲ್ಲವೇ? ನೀವು ಈಗ ಧರಣಿ ಮಾಡಿದರೆ ಅವರು ನಾಳೆಯೇ ಮಂಡಿಸುತ್ತೇವೆಂದು ಹೇಳುತ್ತಾರೆಯೇ?

**ಶ್ರೀ ಎಸ್. ಸುರೇಶ್ ಕುಮಾರ್** : ಸದಸ್ಯರು ಕೇಳುತ್ತಿರುವ ವಿಚಾರದ ಗಹನತೆಯನ್ನು ಅರ್ಥಮಾಡಿಕೊಳ್ಳಿ. ಅದರ ಹಿಂದೆ ಇರುವ ನೋವನ್ನು ಅರ್ಥಮಾಡಿಕೊಳ್ಳಿ. ನಮ್ಮ ಒಬ್ಬ ಶಾಸಕನ ಹತ್ಯೆಯ ಬಗ್ಗೆ ವರದಿ ಬಂದಿಲ್ಲ, ಆ ವಿಷಯದ ಬಗ್ಗೆ ಆಯೋಗವನ್ನು ರಚಿಸಿದ್ದೀರಿ. ಎರಡು ಆಯೋಗಗಳು ಸಹ ವರದಿಯನ್ನು ಕೊಟ್ಟಿವೆ ಎಂದು ತಾವು ಹೇಳುತ್ತೀರಿ. ಅದನ್ನು ಮುಚ್ಚಿಡಲಿಕ್ಕೆ ಆಗುವುದಿಲ್ಲ ಅವೆಲ್ಲವೂ ಬೇರೆ ವಿಚಾರ ಸರ್ಕಾರವೇ ನೇಮಿಸಿದ ಆಯೋಗಗಳು ವರದಿಯನ್ನು ಕೊಟ್ಟ ಮೇಲೆ ಅದನ್ನು ಇಡಲೇಬೇಕೆಂದು ನಿಮಗೆ ಒಂದು ಸ್ಪ್ಯಾಚುಟರಿ ಗೈಡ್‌ಲೈನ್ಸ್ ಇರುವಾಗ ... why you are refusing to place it before the House?

**ಶ್ರೀ ಎಂ.ಪಿ. ನಾಣಯ್ಯ** : ಮಾನ್ಯ ಹೆಗಡೆಯವರ ಜೊತೆಯಲ್ಲಿ ಈ ವಿಚಾರವನ್ನು ಪ್ರಸ್ತಾಪ ಮಾಡುವಾಗಲೇ ನಾನು ಹೇಳಿದ್ದೇನೆ. ಸುರೇಶ್‌ಕುಮಾರ್ ಜೊತೆಯಲ್ಲಿ ಹೇಳಿದ್ದೇನೆ. ಇದನ್ನು ಏತಕ್ಕಾಗಿ ಮುಚ್ಚಿಡಬೇಕು? ಅವರುಗಳು ಸದನದ ಬಾವಿಯೊಳಗಡೆ ಬಂದಿದ್ದಾರೆ. ಅವರು ಸದನದ ಬಾವಿಯೊಳಗೆ ಬಂದಿರುವುದರಿಂದ ಬಹುಶಃ ಅವರಿಗೆ ಮಾತನಾಡುವಂತಹ ಅವಕಾಶ ಸಹ ಇರುವುದಿಲ್ಲ. ಅವಕಾಶ ಸ್ವಲ್ಪ ಮಟ್ಟಿಗೆ ಕಡಿಮೆ ಇರುತ್ತದೆ. ನೀವು ಒಟ್ಟಾರೆಯಾಗಿ ಈ ರೀತಿ ಕೇಳಿದರೆ ನಮಗೆ ಉತ್ತರವನ್ನು ಸರ್ಕಾರದ ವತಿಯಿಂದ ಹೇಳುವುದಕ್ಕೆ ಕಷ್ಟವಾಗುತ್ತದೆ. ನಾನು ಇಷ್ಟು ಹೇಳುವುದಕ್ಕೆ ಮಾತ್ರ ಇಷ್ಟಪಡುತ್ತೇನೆ. ಈಗಾಗಲೇ ಗೃಹ ಇಲಾಖೆಯವರು ಈ ಎರಡು ವರದಿಗೆ ಸಂಬಂಧಪಟ್ಟಂತಹ ಸಂಪೂರ್ಣವಾದ ವರದಿಯನ್ನು ನೋಡಿ ಅದಕ್ಕೆ ಕೂಲಂಕುಷವಾಗಿರತಕ್ಕಂಥ ಆ್ಯಕ್ಷನ್ ಟೇಕನ್ ರಿಪೋರ್ಟ್‌ನ್ನು ತಯಾರು ಮಾಡುತ್ತಿದ್ದಾರೆ. ಅದರಲ್ಲಿ ಮಾಡಿರತಕ್ಕಂಥ ಶಿಫಾರಸ್ಸುಗಳನ್ನು ಯಾವ ಭಾಗಗಳನ್ನು ಸರ್ಕಾರವು ಒಪ್ಪಬೇಕು, ಯಾವ ಭಾಗವನ್ನು ಒಪ್ಪುವುದಕ್ಕೆ ಆಗುವುದಿಲ್ಲ ಎನ್ನುವ ಬಗ್ಗೆ ಪರಿಶೀಲನೆಯನ್ನು ಮಾಡುತ್ತಿದ್ದೇವೆ. ಅದು ಆದ ಮೇಲೆ ಅಲ್ಲಿರತಕ್ಕಂತ ವಿಚಾರಗಳ ಬಗ್ಗೆ ಸಚಿವ ಸಂಪುಟದ ಸಭೆಗೆ ತಂದು ಅದಕ್ಕೆ ಸಂಬಂಧಪಟ್ಟಿರತಕ್ಕಂಥ ಆ್ಯಕ್ಷನ್ ಟೇಕನ್ ರಿಪೋರ್ಟ್‌ನ್ನು ನಾವು ಅದಕ್ಕೆ ಲಗತ್ತಿಸಿ ವಿಧಾನಸಭೆಗೂ ಹಾಗೂ ವಿಧಾನ ಪರಿಷತ್ತಿಗೂ ನಾವು ಮಂಡಿಸುತ್ತೇವೆ. ಮುಂದಿನ ವಾರ ಸಚಿವರ ಸಂಪುಟದ ಸಭೆ ನಡೆಯುತ್ತಿರುವುದರಿಂದ ಅದರಲ್ಲಿ ಈ ವಿಚಾರವನ್ನು ತರುತ್ತೇವೆ. ಅದನ್ನು ತಂದ ಮೇಲೆ ಚರ್ಚೆ ಮಾಡಿ ಕ್ರಮವನ್ನು ಕೈಗೊಂಡು ಕೂಡಲೇ ಮಾನ್ಯ ಸಭಾಧ್ಯಕ್ಷರಿಗೂ ಮತ್ತು ಮಾನ್ಯ ಸಭಾಪತಿಯವರಿಗೂ ಕೊಡುತ್ತೇವೆ. ಮುಂದಿನ ಒಂದು ತಿಂಗಳ ಒಳಗಡೆ ಈ ಕೆಲಸವನ್ನು ಮಾಡುತ್ತೇವೆ.

**ಛೇರ್‌ಮನ್** : ಸನ್ಮಾನ್ಯ ಕಾನೂನು ಮಂತ್ರಿಗಳಲ್ಲಿ ನಾನು ಕೇಳುವುದಿಷ್ಟೆ. ಈ ವಿಷಯವು ಬಹಳ ಗಹನವಾಗಿರುವಂಥದ್ದು, ಈ ಸದನದ ಸದಸ್ಯರ ಕೊಲೆಯಾಗಿದೆ. ಕಾಲ ಬಹಳ ಮುಂದೆ ಹೋಗುತ್ತಿದೆ. ಇದನ್ನು ತಾವು ಒಂದು ತಿಂಗಳೊಳಗೆ ಎಂದು ಹೇಳುತ್ತೀರಿ, ಇನ್ನು ಒಳಗಡೆ ಬನ್ನಿ ಇದು ಇಲ್ಲಿಯವರೆಗೆ ಲೇಟಾಗಿದೆ. ಇನ್ನು ಮುಂದೆ ಹೋಗಬೇಡಿ.

**ಶ್ರೀ ಎಂ.ಸಿ. ನಾಣಯ್ಯ :** ನಾವು ಸಚಿವ ಸಂಪುಟದ ಸಭೆಯಲ್ಲಿ ತಂದು ಚರ್ಚೆ ಮಾಡಿ, ಆ್ಯಕ್ಷನ್ ಟೇಕನ್ ರಿಪೋರ್ಟ್ ಬಗ್ಗೆ ಚರ್ಚೆ ಮಾಡಿ ಮುಂದಿನ ಕ್ರಮವನ್ನು ಕೈಗೊಂಡು ರಿಪೋರ್ಟಿನ ಜೊತೆಯಲ್ಲಿ ನಾವು ಆ್ಯಕ್ಷನ್ ಟೇಕನ್ ರಿಪೋರ್ಟನ್ನು ಕೊಡಬೇಕಾಗುತ್ತದೆ. ಒಂದು ತಿಂಗಳ ಒಳಗಡೆ ಈ ಕೆಲಸವನ್ನು ಮಾಡುತ್ತೇವೆ.

**ಶ್ರೀ ಕೆ.ಎಸ್. ಈಶ್ವರಪ್ಪ :** ಮಾನ್ಯ ಛೇರ್‌ಮನ್‌ರೆ, ನಾನು ಮಾನ್ಯ ಸಚಿವರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತಿದ್ದೇನೆ. 6 ತಿಂಗಳ ಒಳಗಡೆ ಈ ವರದಿ ಸಿಕ್ಕ ತಕ್ಷಣ ಮಂಡಿಸಬೇಕೆಂದು ಇದೆ. ಆದರೂ ಕೂಡ ಎರಡೂವರೆ ವರ್ಷವಾದರೂ ಕೂಡ ಇದನ್ನು ಮುಂದಿನ ಕ್ಯಾಬಿನೆಟ್‌ನಲ್ಲಿ ಇಟ್ಟು ಆದಷ್ಟು ಬೇಗ ಒಂದು ತಿಂಗಳೊಳಗಡೆ ಮಾಡುತ್ತೇವೆಂದು ಹೇಳಿದ್ದಾರೆ. ಛೇರ್‌ಮನ್‌ರೆ ತಮ್ಮ ಮುಖಾಂತರ ಸರ್ಕಾರಕ್ಕೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ದಯವಿಟ್ಟು ಯಾವುದೇ ಕಾರಣಕ್ಕೂ ಕೂಡ ತಾವು ವಿಧಾನಸಭೆಯಲ್ಲಿ ಏನು ಆಶ್ವಾಸನೆಯನ್ನು ಕೊಟ್ಟಿದ್ದಾರೋ ಆ ಪ್ರಕಾರವೇ ತಾವು ನಡೆದುಕೊಳ್ಳಬೇಕು ಎಂದು ಹೇಳಿರುತ್ತೇನೆ.

**SRI. M.C. NANAIAH :** Thank you very much

ನಾವು ನಡೆದುಕೊಳ್ಳುವ ಸರ್ಕಾರ ಎಂದು ನಿಮಗೆ ಗೊತ್ತು. ಅದು ಆದಮೇಲೆ ನೀವು ನಮಗೆ ಅಭಿನಂದನೆಗಳನ್ನು ಕೊಡುತ್ತಿದ್ದೀರಿ.

**ಶ್ರೀ ಕೆ.ಎಸ್. ಈಶ್ವರಪ್ಪ :** ಆ ರೀತಿ ವಚನ ಬ್ರಷ್ಟರಾಗಬಾರದೆಂದು ಎಚ್ಚರಿಕೆಯನ್ನು ಸಹ ಕೊಡುತ್ತಿದ್ದೇವೆ.

**ಶ್ರೀ ಎಸ್. ಸುರೇಶ್‌ಕುಮಾರ್ :** ತಾವು ಬಹಳ ಬುದ್ಧಿವಂತರು ಆ ಸಂದರ್ಭದಲ್ಲಿ ಬೇರೆ ಉತ್ತರವನ್ನು ಕೊಟ್ಟಿದ್ದೇವೆಂದು ತಾವು ದಯಮಾಡಿ ಹೇಳಬೇಡಿ.

**ಛೇರ್‌ಮನ್ :** ಸನ್ಮಾನ್ಯ ವಾಟಾಳ್ ನಾಗರಾಜ್‌ರವರು ತಾವು ಧರಣಿಯಿಂದ ತಮ್ಮ ಸ್ಥಳಕ್ಕೆ ಹೋಗಿ. ಮಾನ್ಯ ಸಚಿವರೇ, ಉತ್ತರವನ್ನು ಸ್ವಲ್ಪದರಲ್ಲೇ ಕೊಡಿ. ಇನ್ನು ಮಾತನಾಡುವ ಸದಸ್ಯರು ತುಂಬಾ ಇದ್ದಾರೆ.

**(೫) ಚಾಮರಾಜನಗರ ಜಿಲ್ಲಾ ಆಸ್ಪತ್ರೆ ಕುರಿತು**

**ಶ್ರೀ ವಾಟಾಳ್‌ನಾಗರಾಜ್ :** ಮಾನ್ಯ ಅಧ್ಯಕ್ಷರೆ, ನಾನು ಆಗಲೇ ತಮ್ಮ ಮೂಲಕ ಸರ್ಕಾರದ ಗಮನ ಸೆಳೆದಿದ್ದೇನೆ. ಚಾಮರಾಜನಗರದ ಜಿಲ್ಲಾ ಆಸ್ಪತ್ರೆ ಅದು ನರಕ.

**ಛೇರ್ಮನ್ :** ಅದರ ಬಗ್ಗೆ ತಾವು ಬೆಳಿಗ್ಗೆ ಪೂರ್ತಿ ಹೇಳಿದ್ದೀರಿ. ಆರೋಗ್ಯ ಮಂತ್ರಿಗಳು ತಾವು ಹೇಳಿದಾಗ ಕೇಳಿಸಿಕೊಂಡಿದ್ದಾರೆ. ಅವರು ಅಲ್ಲೇ ಇದ್ದರು, ತಾವು ಬೆಳಿಗ್ಗೆ ಸಂಪೂರ್ಣ ಎಲ್ಲವನ್ನು ಹೇಳಿದ್ದೀರಿ. ಅವರು ಉತ್ತರ ಕೊಡುತ್ತಾರೆ ಅನಂತರ ತಮಗೆ ಏನು ಬೇಕೋ ಕೇಳಿ.

**ಡಾ. ಹೆಚ್. ಸಿ. ಮಹದೇವಪ್ಪ** (ಮಾನ್ಯ ಆರೋಗ್ಯ ಸಚಿವರು) **:** ಮಾನ್ಯ ಸದಸ್ಯರು ಹೇಳುವಾಗ ನಾನು ಇಲ್ಲೆ ಇದ್ದೆ. ಮಾನ್ಯ ಹಿರಿಯ ಸದಸ್ಯರಾದ ವಾಟಾಳ್ ನಾಗರಾಜ್‌ರವರು, ಅವರ ಕ್ಷೇತ್ರದ